2010–11, ರದ್ದು ಇಲ್ಲಿಯವರೆಗೆ ಕೆಲಸವಾಗಿಲ್ಲ. ಅದಕ್ಕೆ ದಯಮಾಡಿ Appendix-E ನಲ್ಲಿ ಇರುವುದನ್ನಾದರೂ ಕರೆಯಿರಿ. ದಯಮಾಡಿ ಅದನ್ನು ಕರೆಯಬೇಕೆಂದು ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರ ಗಮನ ಸೆಳೆಯುತ್ತೇನೆ. ಇಲ್ಲಿ ಏನಾಗಿದೆ ಎಂದರೆ tender estimate ನ್ನು e-mail ಮೂಲಕ ಕಳುಹಿಸುತ್ತೀರಿ. Estimate ಆದ ಮೇಲೆ ಮತ್ತೆ ತಾಂತ್ರಿಕ bid ಇವೆಲ್ಲಾ ತಮ್ಮ ಗಮನಕ್ಕೆ ಬೆಳಿಗ್ಗೆ BAC ಯಲ್ಲಿ ಹೇಳಿದ್ದೇನೆ. ಆದುದರಿಂದ Appendix-E ಆಗಿರುವುದು ಫೆಬ್ರವರಿ ತಿಂಗಳಲ್ಲಿ ಆಗಿದೆ. ಅದಕ್ಕೆ ದಯಮಾಡಿ ಕೂಡಲೇ ಅದನ್ನು ಮಾಡಬೇಕೆಂದು ಬೆಳಿಗ್ಗೆ ತಮ್ಮ ಗಮನಕ್ಕೆ ತಂದಿದ್ದೇವೆ. Appendix-E ನ್ನು ಕೂಡಲೇ ಜಾರಿಗೆ ತರಬೇಕು.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : – ಮಾನ್ಯ ಸದಸ್ಯರ ಕೋರಿಕೆಗೆ ನಾಳೆ ಇಲ್ಲಿ ಉತ್ತರ ಕೊಡುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ. ಅವರು ಹೇಳಿದ ಹಾಗೆ Appendix-E ನಲ್ಲಿ ಟೆಂಡರ್ ಕರೆಯುವುದರಲ್ಲಿ ವಿಳಂಬವಾಗುತ್ತಿರುವುದರ ಬಗ್ಗೆ ಕೆಲವು ಪ್ರಸ್ತಾವನೆ ಮಾಡಿದ್ದಾರೆ. ಇಲಾಖಾಧಿಕಾರಿಗಳು ಮತ್ತು ಅವರ ಜೊತೆಗೆ ಚರ್ಚೆ ಮಾಡಿ ಇದಕ್ಕೆ ಸೂಕ್ತ ಪರಿಹಾರ ಕಂಡು ಹಿಡಿಯುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಪ್ರಕಾಶ ಬಿ. ಹುಕ್ಕೇರಿ :– ಮಾನ್ಯ ಅಧ್ಯಕ್ಷರೆ, ಇದಕ್ಕೆ ಪೂರಕವಾಗಿ ಹೇಳುವುದಾದರೆ, Appendix-E ನಲ್ಲಿ ನಮ್ಮ ಬಿಲ್ಡಿಂಗ್ ಬಂದಿಲ್ಲ. ಸರ್ಕಾರಿ ಕಟ್ಟಡ, ಇವು ಯಾವುದೂ ಬಂದಿಲ್ಲ. ಅದರ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಬೇಕು.

ಶ್ರೀ ಸಿ.ಎಂ. ಉದಾಸಿ :– ಅದಕ್ಕೆ ಸಪರೇಟಾಗಿ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ.

7. ವಿಷಯ : ಪ್ರೀ ಯುನಿವರ್ಸಿಟಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಬಯಲಾಗಿದ್ದು ಸಿ.ಬಿ.ಐ. ತನಿಖೆಗೆ ಒಪ್ಪಿಸುವ ಬಗ್ಗೆ

ಶ್ರೀ ನೆ.ಲ. ನರೇಂದ್ರ ಬಾಬು (ಮಹಾಲಕ್ಷ್ಮಿ ಲೇಔಟ್) :– ಮಾನ್ಯ ಅಧ್ಯಕ್ಷರೆ, ನಿನ್ನೆಯಷ್ಟೆ pre university ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಬಯಲಾಗಿ ಪರೀಕ್ಷೆಗಳನ್ನು ಮುಂದೂಡಿರುವದರ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡುವಾಗ ಪ್ರತಿಪಕ್ಷದವರಾದ ನಾವು ನಿಮ್ಮ ಉತ್ತರಕ್ಕೆ ಸಮಾಧಾನವಾಗದೇ CBI ಗೆ ಕೊಡಿ ಎಂದು ಕೇಳಿದೆವು. ನೀವು ಕೊಡಲಿಲ್ಲ. ಇದಕ್ಕೆ ನಾವು ಸಭಾತ್ಯಾಗ ಮಾಡಿದೆವು.

ಆದರೆ, ನಿನ್ನೆ ನೀತು ಎನ್ನುವ pre-universiry ಯ ವಿದ್ಯಾರ್ಥಿನಿ, ಗ್ರಾಮಪಂಚಾಯಿತಿ ಸದಸ್ಯರಾದ ಉಮಾಪತಿ ಎನ್ನುವವರ ಮಗಳು, ಈ ಒಂದು ಪರೀಕ್ಷೆ ಬರೆಯಲಿಕ್ಕೆ ಹಿಂಜರಿದು ಈ ರೀತಿಯಾಗಿ ಪರೀಕ್ಷೆ ಮುಂದೂಡಿರುವುದರಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದಕ್ಕೆ ಯಾರು ಹೊಣೆ? ಇದಕ್ಕೆ ಏನು ಪರಿಹಾರ ಕೊಡುತ್ತೀರಾ? ಈ ರೀತಿಯಾಗಿ ಮಕ್ಕಳು ವ್ಯಾಕುಲತೆಗೆ ಒಳಗಾಗಿರುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ? ಇದಕ್ಕೆ ಸರ್ಕಾರ ಉತ್ತರಿಸಬೇಕೆಂದು ವಿನಂತಿ ಮಾಡುತ್ತೇನೆ. ಇದು ಆಗಿರುವುದು ದಾವಣಗೆರೆಯಲ್ಲಿ.

ಶ್ರೀ ಪ್ರಕಾಶ ಬಿ. ಹುಕ್ಕೇರಿ :– ಅಧ್ಯಕ್ಷರೆ ನಾನು ಕೇಳಿರುವುದಕ್ಕೆ ಅವರು ಉತ್ತರ ಕೊಡಲಿಲ್ಲ.

ಅಧ್ಯಕ್ಷರು :– ಅವರು ಹೇಳಿದರು. ನೀವು ಕೇಳಲಿಲ್ಲ ಅಷ್ಟೆ.

ಶ್ರೀ ಪ್ರಕಾಶ ಬಿ. ಹುಕ್ಕೇರಿ :– ಅವರು ಏನು ಹೇಳಿದರು ಎಂದು ಈ ಕಡೆಯವರಿಗೆ ಯಾರಿಗೂ ಕೇಳಲೇ ಇಲ್ಲ. ತಾವು ದಯಮಾಡಿ ಹೇಳಬೇಕು.

ಅಧ್ಯಕ್ಷರು :– Please, ನೀವು ಈ ತರಹ ಮಧ್ಯೆ ಮಧ್ಯೆ ಎದ್ದು ಹೇಳಿದರೆ ಹೇಗೆ? ನೀವು ಅವರ ಹತ್ತಿರ ಹೋಗಿ ಮಾತನಾಡಿ.

ಶ್ರೀ ಪ್ರಕಾಶ ಬಿ. ಹುಕ್ಕೇರಿ :– ನಿಮ್ಮ ಬಗ್ಗೆ ನಮಗೆ ಅಪಾರವಾದ ಗೌರವ ಇದೆ. ಅದರ ಬಗ್ಗೆ ಏನು ಹೇಳಿದ್ದಾರೆಂಬುದನ್ನು ಹೇಳಲಿ. ಇಲ್ಲಿ ಏನಾಗಿದೆ ಎಂದರೆ, ಕೋರ್ಟು ಬಿಲ್ಡಿಂಗ್ ಹೋದ ಸಾರಿ 2009–10 ರಲ್ಲಿ ಸೇರಿತ್ತು.

ಅಧ್ಯಕ್ಷರು :– Please, ಈಗ ನರೇಂದ್ರ ಬಾಬುರವರಿಗೆ ನಾನು ಕರೆದು ಅವಕಾಶ ಕೊಟ್ಟಿದ್ದಕ್ಕೆ ಅವರು ಪ್ರಸ್ತಾಪಿಸಿದ್ದಾರೆ. ಅದಕ್ಕೆ ಉತ್ತರ ಹೇಳುವಾಗ ನೀವು ಮಧ್ಯೆ ಎದ್ದು ನಿಂತು ಕೇಳಿದರೆ ಹೇಗೆ? ಸದನ ನಡೆಸುವುದು ಹೇಗೆ?

ಶ್ರೀ ಪ್ರಕಾಶ ಬಿ. ಹುಕ್ಕೇರಿ :– ನಿಮ್ಮ ಅಪ್ಪಣೆ ಪಡೆದು ಕೇಳುತ್ತಿದ್ದೇನೆ.

ಅಧ್ಯಕ್ಷರು :– ನಾನು ನಿಮಗೆ ಮಾತನಾಡುವುದಕ್ಕೆ ಅಪ್ಪಣೆ ಕೊಡಲಿಲ್ಲ.

ಶ್ರೀ ಸಿ.ಎಂ. ಉದಾಸಿ :– ಅವರು ಪ್ರಶ್ನೆ ಕಳುಹಿಸಿ ಕೊಡಲಿ.

ಅಧ್ಯಕ್ಷರು :– ನೀವು ಕುಳಿತುಕೊಳ್ಳಿ. ನೀವು ಉತ್ತರ ಹೇಳಿ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ನರೇಂದ್ರ ಬಾಬುರವರು ಪ್ರಸ್ತಾಪಿಸಿದರು. ಯಾವುದೇ ಒಂದು ರೀತಿಯಲ್ಲಿ ವಿದ್ಯಾರ್ಥಿ ತನ್ನ ಪರೀಕ್ಷೆಗೆ ಮತ್ತೊಂದಕ್ಕೆ ಸಂಬಂಧಪಟ್ಟಿದ್ದಾಗಿದ್ದರೂ ಇದು ಖೇದಕರ. ಆದರೆ, ನಾನು ಬೆಳಿಗ್ಗೆ ಇದಾದ ತಕ್ಷಣ ಪೊಲೀಸ್ ಅಧಿಕಾರಿಗಳನ್ನು ಕರೆದು ಒಂದಷ್ಟು ಪ್ರಾಥಮಿಕ ಮಾಹಿತಿ

ಪಡೆದಿದ್ದೇನೆ. ಪರೀಕ್ಷೆ ಬರೆದಿದ್ದಕ್ಕೆ ಇದಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲವೆಂದು ಮೇಲ್ನೋಟಕ್ಕೆ ಕಂಡು ಬಂದಿದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಆದರೂ ಕೂಡ ಇದೊಂದು ಭಾರಿ sensitive issue. ಮತ್ತು ಇಡೀ ರಾಜ್ಯಾದ್ಯಂತ ಚರ್ಚೆಯಲ್ಲಿರುವಂಥ ವಸ್ತುವಾಗಿರುವ ಕಾರಣ, ಇದರ ಬಗ್ಗೆ ಪೂರ್ತಿ ಮಾಹಿತಿ ಪಡೆದುಕೊಂಡು ಏನು ಎಂದು ತಿಳಿದುಕೊಳ್ಳಬೇಕೆಂದು ಆದೇಶ ಕೊಟ್ಟಿದ್ದೇನೆ. ಯಾವುದೇ ಸಂದರ್ಭದಲ್ಲಿಯೂ ಕೂಡ ಒಂದು ವೇಳೆ ಆ ಪರಿಸ್ಥಿತಿಯಲ್ಲಿ ಅದು ಪರೀಕ್ಷೆಗೆ ಸಂಬಂಧಪಟ್ಟಿದ್ದಾಗಿದ್ದರೆ ಅದರ ಬಗ್ಗೆ ತನಿಖೆಗೆ ಬೇಕಾದಂಥ ವ್ಯವಸ್ಥೆಗಳನ್ನು ಮಾಡಿರುವಂಥದ್ದರ ಜೊತೆಗೆ ಇದರ ಹಿನ್ನೆಲೆಯನ್ನು ತಿಳಿದುಕೊಳ್ಳುವಂಥ ಪ್ರಯತ್ನ ಮಾಡುತ್ತೇವೆ. ಆದರೆ, ಮೇಲ್ನೋಟಕ್ಕೆ ಇದಕ್ಕೂ ಪರೀಕ್ಷೆಗೂ ಯಾವುದೇ ರೀತಿಯ ಸಂಬಂಧವಿಲ್ಲವೆಂದು ಕಂಡು ಬಂದಿದೆ ಎಂದು ಪೊಲೀಸ್ ಅಧಿಕಾರಿಗಳಿಂದ ವರದಿ ಪಡೆದುಕೊಂಡಿದ್ದೇನೆ. ಬಾಕಿ ಮಾಹಿತಿ ಹೆಚ್ಚಿಗೆ ಇದ್ದರೆ ಮತ್ತೆ ನಾನು ಸದನದ ಮುಂದೆ ಇಡುತ್ತೇನೆ. ಮತ್ತೊಂದು ಸಲ ನಾನು ಈ ಸದನದ ಮೂಲಕ ಇಡೀ ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಮತ್ತು ವಿದ್ಯಾರ್ಥಿಗಳನ್ನು ಹೆತ್ತವರಿಗೆ ನಾನು appeal ಮಾಡಿಕೊಳ್ಳುತ್ತಿದ್ದೇನೆ. ಯಾವುದೇ ಒಂದು ಆತಂಕ ಮತ್ತೊಂದು ಇಂಥ ಸಂದರ್ಭದಲ್ಲಿ ಸೃಷ್ಟಿಯಾಗುವುದು ಬೇಡ. ಸರ್ಕಾರ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಬದ್ಧವಾಗಿದೆ. ಈ ರೀತಿಯ ಯಾವುದೇ ಘಟನೆಗಳು ಮತ್ತೆ ಮರುಕಳಿಸಿದ ಹಾಗೆ ಹೆತ್ತವರು ಮತ್ತು ಮಕ್ಕಳು ಹೆಚ್ಚು ಆತ್ಮವಿಶ್ವಾಸದಿಂದ ಹೋಗಬೇಕೆಂದು ಹೇಳುವಂಥ ವಿನಂತಿಯನ್ನು ನಾನು ಸದನದ ಮುಖಾಂತರ ರಾಜ್ಯದ ಎಲ್ಲಾ ಮಕ್ಕಳಿಗೆ ಹಾಗೂ ಇತರರಿಗೆ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ :- ಮಾನ್ಯ ಮುಖ್ಯಮಂತ್ರಿಗಳೇ, ನಿನ್ನೆ ಇಲ್ಲಿ ಚರ್ಚೆಯಾಯಿತು. ಶಿಕ್ಷಣ ಮಂತ್ರಿಗಳು ಉತ್ತರ ಕೊಟ್ಟರು. ನಾವು ಏನು ಹೇಳಿದೆವು ಎಂದರೆ, CID Enquiry ಮಾಡಿದರೆ ಜನಗಳಿಗೆ ಅದರಿಂದ ಸಮಾಧಾನವಾಗುವುದಿಲ್ಲ ಅವರ ಆತಂಕ ಹೋಗುವುದಿಲ್ಲ. ಏಕೆಂದರೆ ಅನೇಕ ಸಾರಿ ಈ CID ತನಿಖೆಗಳಿಂದ ಅದರ ಫಲಿತಾಂಶಗಳು ಏನಾಗುತ್ತದೆಂದು ಜನಗಳಿಗೆ ಗೊತ್ತಾಗಿದೆ ಎಂದು ಹೇಳಿದೆವು. ಅದಕ್ಕೆ CBI ಗೆ ಕೊಡಿ ಎಂದು ನಾವು ಒತ್ತಾಯ ಮಾಡಿದೆವು ಅದಕ್ಕೆ ಅವರು ಒಪ್ಪಲಿಲ್ಲ. ಪಾಪ ಈ ಜನಗಳು, ಪೋಷಕರು ನಮಗೆಲ್ಲಾ ಫೋನು ಮಾಡುತ್ತಾರೆ. ಅಸೆಂಬ್ಲಿಯಲ್ಲಿ ಏನಾದರೂ ಮಾಡಿ ಸರ್ಕಾರಕ್ಕೆ ನೀವು ಸರಿಯಾಗಿ ಹೇಳಬೇಕೆಂದು ಹೇಳುತ್ತಾರೆ. ಅವರಿಗೆ

ಏನಾಗಿದೆ ಎಂದರೆ ಪಾಪ ಕೆಲವು ಮಕ್ಕಳು depression ಗೆ ಹೊರಟು ಹೋಗಿ ಬಿಟ್ಟಿದ್ದಾರೆ. Mathematics paper ಮುಂದಕ್ಕೆ ಹೋದ ಮೇಲೆ physics paper ಎಲ್ಲಾ ಮುಂದಕ್ಕೆ ಹೋದ ಮೇಲೆ depressionಗೆ ಹೊರಟು ಹೋಗಿ ಬಿಟ್ಟಿದ್ದಾರೆ. ಮತ್ತೆ ಅವರು CETಗೆ ತಯಾರಾಗಬೇಕು, ಮತ್ತೆ ಇನ್ನೊಂದು ಪರೀಕ್ಷೆಗೆ ತಯಾರಾಗಬೇಕು. ಎಷ್ಟೆಂದು ತಯಾರಾಗುವುದಕ್ಕೆ ಆಗುತ್ತದೆ? ಒಂದು ಸಾರಿ ತಯಾರಾಗಿ ಮತ್ತೆ ಇನ್ನೊಂದು ಸಾರಿ ತಯಾರಾಗುವುದು ಇದೆಯಲ್ಲಾ ಇದು ಭಾರಿ ಕಷ್ಟದ ಕೆಲಸ. ಬಹುಶಃ I don't know, ನಮ್ಮ ಬಾಬುರವರು raise ಮಾಡಿರುವ ಯಾವುದೋ ಹೆಣ್ಣುಮಗಳು ದಾವಣಗೆರೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ವಿಷಯ ಬಹಳ ನೋವಿನ ಸಂಗತಿ. ಪರೀಕ್ಷೆಯಲ್ಲಿ ಈ ಕಾರಣಕ್ಕೋಸ್ಕರ ಪ್ರಶ್ನೆ ಪತ್ರಿಕೆ ಲೀಕ್ ಆಯಿತು, ಪರೀಕ್ಷೆ ಮುಂದಕ್ಕೆ ಹೋಯಿತು, ನನಗೆ ತೊಂದರೆಯಾಗಿಬಿಟ್ಟಿತ್ತು ಎಂದು ಆಗಿದ್ದರೆ, ಇದಕ್ಕೆ ಸರ್ಕಾರ ಜವಾಬ್ದಾರಿಯಾಗುತ್ತದೆ. ಅದಕ್ಕೆ ನಾನು ಏನು ಹೇಳುವುದು ಏನೆಂದರೆ, ಜನಗಳಲ್ಲಿರುವ ಆತಂಕ ತೊಲಗಬೇಕು. ನಾವು ಈ ತರಹ ಮಾಡುತ್ತೇವೆ. ಮತ್ತೆ ಇಲ್ಲಿ ಮರುಕಳಿಸದ ರೀತಿ ನೋಡಿಕೊಳ್ಳುತ್ತೇವೆ ಎನ್ನುವುದು ಆಗಬೇಕು. ಇದು ಮತ್ತೆ ಆಗಬಾರದು, ಅವರಿಗೆ ಆತ್ಮವಿಶ್ವಾಸ ಬರಲಿ ಎಂದು ನಾವು ಎಷ್ಟೇ ಹೇಳಿದರೂ ಕೂಡ, ನಮಗೆ ಇರುವ ಮನಸ್ಥಿತಿಗೂ ಆ ಮಕ್ಕಳಿಗೆ ಇರುವ ಮನಸ್ಥಿತಿಗೂ ಬಹಳ ಹೆಚ್ಚು ಕಡಿಮೆ ಇರುತ್ತದೆ. ಆ ಮಕ್ಕಳ ಮನಸ್ಥಿತಿಯ ಮೇಲೆ ನಾವು ನೋಡಿಕೊಂಡು ತೀರ್ಮಾನ ಮಾಡಬಾಕಾಗುತ್ತದೆ. ಅದಕ್ಕೋಸ್ಕರ ಗಂಭೀರವಾಗಿ ಸರ್ಕಾರ ಇದನ್ನು ತೆಗೆದುಕೊಳ್ಳಬೇಕು. ಜನರಲ್ಲಿ ಈ ಆತಂಕ ತೊಲಗಿಸತಕ್ಕಂಥ ರೀತಿಯಲ್ಲಿ ಅವರು ಕಾರ್ಯಪ್ರವೃತ್ತರಾಗಬೇಕು.

ಶ್ರೀ ನೆ.ಲ. ನರೇಂದ್ರ ಬಾಬು :– ಅಧ್ಯಕ್ಷರೆ, ಒಂದು ನಿಮಿಷ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರಕ್ಕೆ ನನ್ನ ಆಕ್ಷೇಪಣೆ ಇದೆ.

ಅಧ್ಯಕ್ಷರು :– Please, ಶೂನ್ಯ ವೇಳೆಯಲ್ಲಿ ಮತ್ತೆ ಮತ್ತೆ ಕೇಳುವುದಕ್ಕೆ ಅವಕಾಶವಿಲ್ಲ.

ಶ್ರೀ ನೆ.ಲ. ನರೇಂದ್ರ ಬಾಬು :– ಆ ಹುಡುಗಿ ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥದ್ದು ಅವರ ಅಪ್ಪ Complaint ಕೊಟ್ಟಿದ್ದಾರೆ. Police Station ನಲ್ಲಿ ದಾಖಲಾಗಿದೆ. ಬೆಳಿಗ್ಗೆ ಆ Sub-Inspector ಹತ್ತಿರ ಮಾತನಾಡಿದ್ದೇನೆ.

ಅಧ್ಯಕ್ಷರು :– ಆಯಿತು ಬಿಡಿ. ಮಾಹಿತಿ ತಂದು ಕೊಡುತ್ತೇನೆಂದು ಹೇಳಿದ್ದಾರಲ್ಲಾ?

ಶ್ರೀ ನೆ.ಲ ನರೇಂದ್ರಬಾಬು :- ಹಾಗಾದರೆ ಪುನಃ ಏಕೆ ಮಾನ್ಯ ಮುಖ್ಯಮಂತ್ರಿಗಳು ತಪ್ಪು ಮಾಹಿತಿ ಕೊಡುತ್ತಾರೆ? ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ :- ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ಪ್ರತಿ ಪಕ್ಷದ ನಾಯಕರು ಒಂದಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದರು. CID ಯ ಬಗ್ಗೆ ಸ್ವಲ್ಪ ಏನೋ ಮನಸ್ಸಿನಲ್ಲಿ ಒಂದು ಸಣ್ಣ ಸಮಾಧಾನವಿಲ್ಲದ ರೀತಿಯಲ್ಲಿ ಅವರು ಪ್ರಸ್ತಾಪ ಮಾಡಿದರು.

ಶ್ರೀ ಸಿದ್ದರಾಮಯ್ಯ :- ನಾನು ನನ್ನ ಅನುಭವದ ಆಧಾರದಲ್ಲಿ ಹೇಳಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ :- ನೀವೂ ಕೂಡ ಹಿಂದೆ ಈ ಭಾಗದಲ್ಲಿ ಮಂತ್ರಿಯಾಗಿ ಕುಳಿತುಕೊಂಡು ಇದನ್ನೆಲ್ಲಾ ನಿರ್ವಹಣೆ ಮಾಡಿದವರು. ಇವತ್ತು CBI ಬಗ್ಗೆ ಕೂಡ ದೇಶದಲ್ಲಿ ಏನೆಲ್ಲಾ ಮಾತನಾಡುತ್ತಾರೆ ಎಂಬುದು ಇಡೀ ಜಗತ್ತಿಗೆ ಗೊತ್ತಿರುವಂಥ ಸಂಗತಿ. ಆದಕಾರಣ ಯಾವುದೋ institution ನ ಬಗ್ಗೆ ನಾವು ಒಂದು ರೀತಿಯಲ್ಲಿ ಅಗೌರವದಿಂದ ಪ್ರಸ್ತಾಪ ಮಾಡಬೇಕಾದ ಅಗತ್ಯವಿಲ್ಲ. ಇವತ್ತು CID ಯಲ್ಲಿ ಒಳ್ಳೆಯ upright officers ಇರುವುದನ್ನು ನಾವು ಗಮನಿಸಿದ್ದೇವೆ. ನಮಗೆ ವಿಶ್ವಾಸವಿದೆ. ಅದರಿಂದ ಸೂಕ್ತವಾದಂಥ ತನಿಖೆಯಾಗುತ್ತದೆ. ಅದರಿಂದ ಬರುವಂಥ ವರದಿಗಳು ಖಂಡಿತವಾಗಿಯೂ ಸತ್ಯದ ವರದಿಗಳು ಬರುತ್ತದೆಂದು ಹೇಳುವಂಥ ವಿಶ್ವಾಸ ನಮಗಿದೆ. ಆ ಹಿನ್ನೆಲೆಯಲ್ಲಿ ಇದನ್ನು ಮಾಡುತ್ತಿದ್ದೇವೆಂದು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಎರಡನೆಯದಾಗಿ, ಇವತ್ತು ನಾನು ಪ್ರಾರಂಭದಲ್ಲಿ ಹೇಳಿದಾಗಲೂ ಕೂಡ ತಮ್ಮಲ್ಲಿ ಒಂದು ಹೇಳಿದೆ. ಪ್ರಾಥಮಿಕ ಮಾಹಿತಿಗಳ ಪ್ರಕಾರ ನಮಗೆ ಸಿಕ್ಕಿದ ವರದಿಯ ಪ್ರಕಾರ ಈ ಸಂಗತಿಗಳು ಯಾವುದೇ ಸಂದರ್ಭದಲ್ಲಿಯೂ ಸಹಿತ ಅದಕ್ಕೆ link ಆಗಿಲ್ಲವೆಂದು ಹೇಳುವಂಥದ್ದು. ಆದರೆ, ತನಿಖೆಯಾದ ಮೇಲೆ ಸತ್ಯಸಂಗತಿಗಳು ಬಂದ ಮೇಲೆ ಮತ್ತೆ ಅದು ಸತ್ಯ ಆದರೆ ಅದು ಸತ್ಯವೆಂದು ಹೇಳುವುದಕ್ಕೆ ನಾನೇನು ಹಿಂದು ಮುಂದು ನೋಡುವುದಿಲ್ಲ. ಅದನ್ನು ಮಾಡುವಂಥ ಕೆಲಸ ಕಾರ್ಯಗಳನ್ನು ಮಾಡುತ್ತೇವೆ.

8. ವಿಷಯ : ವಕ್ಫ್ ಬೋರ್ಡ್‌ನಲ್ಲಿ ಸುಮಾರು 2 ಲಕ್ಷ ಕೋಟಿ ರೂಪಾಯಿಗಳಷ್ಟು ಅವ್ಯವಹಾರ ಆಗಿರುವ ಕುರಿತು ಅಲ್ಪ ಸಂಖ್ಯಾತರ ಆಯೋಗದ ಅಧ್ಯಕ್ಷರು ನೀಡಿರುವ ವರದಿಯ ಬಗ್ಗೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) :- ಮಾನ್ಯ ಅಧ್ಯಕ್ಷರೆ, ಅಲ್ಪ ಸಂಖ್ಯಾತರ ಆಯೋಗ ಸರ್ಕಾರಕ್ಕೆ ನೀಡಿರುವಂಥ ವರದಿಯಲ್ಲಿ ವಕ್ಫ್‌ಗೆ